Online Newspaper Clipping Service

**Dtd- Saturday, 08th, September- 2018**



**ಕೋಲಾರಪತ್ರಿಕೆ**

# ನೆರೆ ಸಂತ್ರಸ್ತರ ನೆರವಿಗೋಸ್ಕರ ಅರಸು ವಿದ್ಯಾಸಂಸ್ಥೆಯಿಂದ ಕೋಟಿ ರೂ.ದೇಣಿಗೆ



ಕೋಲಾರ ಸೆ.೭

ಕೊಡಗು ಮತ್ತು ಕೇರಳ ಪ್ರವಾಹ ಸಂತ್ರಸ್ತರಿಗಾಗಿ ತಲಾ ೫೦ ಲಕ್ಷ ರೂ. ಗಳ ಎರಡು ಚೆಕ್‌ಗಳನ್ನು ಜಿಲ್ಲಾ ಉಸ್ತುವಾರಿ ಸಚಿವರ ಮೂಲಕ ಜಿಲ್ಲಾಧಿಕಾರಿಗಳಿಗೆ ಶ್ರೀ ದೇವರಾಜ ಅರಸ್ ವೈದ್ಯಕೀಯ ,ವಿದ್ಯಾಲಯ ಮತ್ತು ಆರ್.ಎಲ್. ಜಾಲಪ್ಪ ಸಂಸ್ಥೆಯ ಪರವಾಗಿ ಟ್ರಸ್ಟ್ ಕಾರ್ಯದರ್ಶಿ ಜಿ.ಎಚ್. ನಾಗರಾಜ್ ಮತ್ತು ಕುಲಪತಿ ಡಾ। ಕುಮಾರ್ ಹಸ್ತಾಂತರಿಸಿದರು.

ಚೆಕ್‌ಗಳನ್ನು ಸ್ವೀಕರಿಸಿದ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಸಚಿವ ಕೃಷ್ಣ ಬೈರೇಗೌಡರು ಈ ಸಂಸ್ಥೆಯವರು ಕಷ್ಟದಲ್ಲಿರುವವರಿಗೆ ನೆರವು ನೀಡಿ ಸಹಾಯ ಹಸ್ತ ಚಾಚಿದ್ದಾರೆ. ಮನುಷ್ಯತ್ವ ಗುಣ, ಮಾನವ ಧರ್ಮಗಳ ಬದ್ಧತೆಯನ್ನು ಪ್ರದರ್ಶಿಸಿದ್ದಾರೆಂದು ಶ್ಲಾಘಿಸಿದರು.

ಟ್ರಸ್ಟ್ ಕಾರ್ಯದರ್ಶಿ ಜಿ.ಎಚ್. ನಾಗರಾಜ್ ಅವರು ಆಸ್ಪತ್ರೆ ಪಕ್ಕದಲ್ಲಿ ಕೋಚಿಮುಲ್ ನಿವೇಶನವಿದ್ದು, ತಾತ್ಕಾಲಿಕವಾಗಿ ವಾಹನ ನಿಲ್ದಾಣವಾಗಿ ಬಳಸಲು ಅವಕಾಶ ಕಲ್ಪಿಸಿಕೊಡಬೇಕೆಂದೂ, ಕಟ್ಟಡ ಕಟ್ಟುವ ಸಂದರ್ಭದಲ್ಲಿ ಬಿಟ್ಟುಕೊಡುವುದಾಗಿ ಕೋಚಿಮುಲ್ ಅಧ್ಯಕ್ಷರು, ಮಾಲೂರು ಶಾಸಕರು ಆದ ಕೆ.ವೈ. ನಂಜೇಗೌಡರಲ್ಲಿ ಕೋರಿದರು. ಇದಕ್ಕೆ ವಿಧಾನಸಭಾಧ್ಯಕ್ಷ ಕೆ.ಆರ್. ರಮೇಶ್ ಕುಮಾರ್, ಶಾಸಕ ಕೆ. ಶ್ರೀನಿವಾಸಗೌಡರು ಧ್ವನಿಗೂಡಿಸಿ, ಬೋರ್ಡ್‌ನಲ್ಲಿಟ್ಟು, ಪರಿಶೀಲಿಸಲು ಸೂಚಿಸಿದರು. ಈ ಬಗ್ಗೆ ಕ್ರಮ ಕೈಗೊಳ್ಳುವುದಾಗಿ ನಂಜೇಗೌಡರು ಭರವಸೆ ಇತ್ತರು.

ವೈದ್ಯಕೀಯ ಕಾಲೇಜ್, ಜಾಲಪ್ಪ ಆಸ್ಪತ್ರೆ ಹಾಗೂ ದೊಡ್ಡಬಳ್ಳಾಪುರ ಜಾಲಪ್ಪ ಸಂಸ್ಥೆಯ ಎಲ್ಲ ಉದ್ಯೋಗಿಗಳು ಒಂದು ದಿನದ ವೇತನ ನೀಡಲಿದ್ದು, ಅದು ೧೮ ಲಕ್ಷ ರೂ.ಗಳಾಗಿದೆಯೆಂದು ಟ್ರಸ್ಟ್‌ನ ಹಣಕಾಸು ನಿರ್ದೇಶಕ ರಾಜೇಂದ್ರ ಅವರು ತಿಳಿಸಿದರು.

ಈ ಸಂದರ್ಭದಲ್ಲಿ ಉಪ ಕುಲಪತಿ ಡಾ। ಸಿ.ವಿ. ರಘುವೀರ್, ವೈದ್ಯಕೀಯ ಅಧೀಕ್ಷಕ ಡಾ। ಲಕ್ಷ್ಮಯ್ಯ, ಪ್ರಾಂಶುಪಾಲ ಡಾ। ಹಿತೇಂದ್ರಕುಮಾರ್, ಆಡಳಿತಾಧಿಕಾರಿ ಹನುಮಂತ ರಾವ್ ಇತರರು ಉಪಸ್ಥಿತರಿದ್ದರು.

ಅತ್ಯಾಧುನಿಕ ಶಸ್ತ್ರ ಚಿಕಿತ್ಸಾ ಸಂಕೀರ್ಣವನ್ನು ನಿರ್ಮಿಸಲಾಗುತ್ತಿದ್ದು, ಸದ್ಯದಲ್ಲಿಯೇ ಪ್ರಾರಂಭಿಸಲಾಗುವುದೆಂದೂ, ವಿವಿಧ ರೀತಿಯ ೧೨ ಶಸ್ತ್ರ ಚಿಕಿತ್ಸಾ ಕೊಠಡಿಗಳು, ೩೪ ಹಾಸಿಗೆಗಳ ತುರ್ತು ನಿಗಾ ಘಟಕ, ೨೪ ಯುನಿಟ್ ಡಯಾಲಿಸಿಸ್ ಹಾಸಿಗೆಗಳನ್ನು ಇದು ಒಳಗೊಂಡಿರುತ್ತದೆ ಎಂದು ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್. ನಾಗರಾಜ್ ಪತ್ರಿಕೆಯವರಿಗೆ ತಿಳಿಸಿ, ಸುಮಾರು ೩೮ ಕೋಟಿ ರೂ. ವೆಚ್ಚವಾಗಲಿದೆ ಎಂದರು.

ಉದಯವಾಣಿ



# ಸಂತ್ರಸ್ತರಿಗೆ ಕೋಟಿ ರೂ. ನೆರವು

## ಕೊಡಗು, ಕೇರಳ ನೆರೆ ಸಂತ್ರಸ್ತರಿಗಾಗಿ ದೇವರಾಜ ಅರಸು ಉನ್ನತ ಶಿಕ್ಷಣ ಸಂಸ್ಥೆಯಿಂದ ಸಚಿವರಿಗೆ ಚೆಕ್ ಸಲ್ಲಿಕೆ

**ಕೋಲಾರ:** ನಗರದ ಶ್ರೀ ದೇವರಾಜ . ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಕೊಡಗು ಹಾಗೂ ಕೇರಳ ಸಂತ್ರಸ್ತರಿಗೆ ಒಂದು ಕೋಟಿ ರೂ.ನೆರವನ್ನು ಘೋಷಿಸಿದೆ.

ನಗರದ ತಮ್ಮ ಸಂಸ್ಥೆಗೆ ಶುಕ್ರವಾರ ಆಗಮಿಸಿದ್ದ ಸ್ಪೀಕರ್ ರಮೇಶ್‌ಕುಮಾರ್ ಸಮ್ಮುಖದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಕೃಷ್ಣಬೈರೇಗೌಡರಿಗೆ ಕೇರಳಕ್ಕೆ 50 ಲಕ್ಷ ರೂ. ಹಾಗೂ ಕೊಡಗು ಸಂತ್ರಸ್ತರಿಗೆ 50 ಲಕ್ಷ ರೂ. ಚೆಕ್ ಅನ್ನು ಆಯಾ ರಾಜ್ಯಗಳ ಮುಖ್ಯಮಂತ್ರಿಗಳ ಪರಿಹಾರ ನಿಧಿಗೆ ತಲುಪಿಸುವಂತೆ ಹಸ್ತಾಂತರಿಸಲಾಯಿತು.

ದೇವರಾಜ ಅರಸು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್‌ರಿಂದ ಪರಿಹಾರ ನಿಧಿ ಚೆಕ್‌ಗಳನ್ನು ಸ್ವೀಕರಿಸಿದ ಸಚಿವ ಕೃಷ್ಣಬೈರೇಗೌಡರು, ದೇವರಾಜ ಅರಸು ಸಂಸ್ಥೆಯ ಹಿರಿಯರಾದ ಆರ್.ಎಲ್.ಜಾಲಪ್ಪರ ಸೇವಾ ಕಾರ್ಯವನ್ನು ಶ್ಲಾಘಿಸಿದರು.

**ನೌಕರರು, ಸಂಸ್ಥೆಯ ಕಾಣಿಕೆ:** ಅರಸು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಹಾಗೂ ಕುಲಾಧಿಪತಿ ಡಾ.ಎಸ್.ಕುಮಾರ್, ಕುಲಪತಿ ಡಾ.ಸಿ.ವಿ.ರಘುವೀರ್, ಆಡಳಿತ ಮಂಡಳಿ ಹಣಕಾಸು ಶಾಖೆ ನಿರ್ದೇಶಕ ಜೆ.ರಾಜೇಂದ್ರ ಮಾತನಾಡಿ, ಈ ಹಿಂದೆಯೂ ಗುಜರಾತ್ ಭೂಕಂಪ, ಹಿಮಾಚಲ ಪ್ರದೇಶದಲ್ಲಿ ಸಂಭವಿಸಿದ ಮೋಡ ಸಿಡಿಲ ಮಳೆ ದುರ್ಘಟನೆ, ಚೆನ್ನೈ ಪ್ರಳಯ ಮುಂತಾದ ಸಂದರ್ಭಗಳಲ್ಲೂ ಮಾನವೀಯ ಅನುಕಂಪದಿಂದ ತಮ್ಮ ಸಂಸ್ಥೆ ಕೈಲಾದ ಮಟ್ಟಿಗೆ ನೆರವನ್ನು ಘೋಷಿಸಿತ್ತು. ಈ ಬಾರಿ ಹಿಂದೆಂದೂ ಕಂಡರಿಯದ ರೀತಿಯಲ್ಲಿ ಕೊಡಗು ಹಾಗೂ ಕೇರಳ ರಾಜ್ಯಗಳಲ್ಲಿ ಮಳೆಯಿಂದ ಭಾರೀ ಪ್ರಮಾಣದ ಹಾನಿ ಸಂಭವಿಸಿದೆ. ಆದ್ದರಿಂದ, ತಮ್ಮ ಸಂಸ್ಥೆಯ ಸಂಸ್ಥಾಪಕ ಆರ್.ಎಲ್.ಜಾಲಪ್ಪರ ಸೂಚನೆ ಮೇರೆಗೆ ತಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಸುಮಾರು 2 ಸಾವಿರ ಮಂದಿ ಉದ್ಯೋಗಿಗಳು ತಮ್ಮ ಒಂದು ದಿನದ ವೇತನವಾಗಿ 18 ಲಕ್ಷ ರೂ. ಅನ್ನು ನಿಧಿಗೆ ಉದಾರ ಮನಸ್ಸಿನಿಂದ ನೀಡಿದ್ದಾರೆ. ಇದಕ್ಕೆ 82 ಲಕ್ಷ ರೂ. ಅನ್ನು ಸಂಸ್ಥೆಯಿಂದ ಸೇರಿಸಿ 1 ಕೋಟಿ ರೂ. ಮಾಡಲಾಗಿದೆ. ತಲಾ 50 ಲಕ್ಷ ರೂ. ಅನ್ನು ಕೊಡಗು ಹಾಗೂ ಕೇರಳ ಸಂತ್ರಸ್ತರ ನಿಧಿಗೆ ಕಳುಹಿಸುತ್ತಿರುವುದಾಗಿ ವಿವರಿಸಿದರು.

ಈಗಾಗಲೇ ತಮ್ಮ ಸಂಸ್ಥೆಯು ಸಾಮಾಜಿಕ ಸೇವಾ ಕಾರ್ಯಕ್ರಮಗಳನ್ನು ಹೆಚ್ಚಿನ ರೀತಿಯಲ್ಲಿ ನಡೆಸಿಕೊಂಡು ಬರುತ್ತಿದ್ದು, ಗ್ರಾಮಾಂತರ ಪ್ರದೇಶದಲ್ಲಿ ಅತ್ಯುನ್ನತ ವೈದ್ಯಕೀಯ ಚಿಕಿತ್ಸೆಯನ್ನು ನೀಡುತ್ತಿರುವ ಸಂಸ್ಥೆಯಾಗಿದೆ. ಮುಂದಿನ ಒಂದು ತಿಂಗಳೊಳಗಾಗಿ ಜಾಲಪ್ಪರ ಹುಟ್ಟುಹಬ್ಬದ ಕೊಡುಗೆಯಾಗಿ ಸಂಸ್ಥೆ 38 ಕೋಟಿ ರೂ. ವೆಚ್ಚದಲ್ಲಿ ಅತ್ಯಾಧುನಿಕ ಆಪರೇಷನ್ ಥಿಯೇಟರ್ ಅನ್ನು ಲೋಕಾರ್ಪಣೆ ಮಾಡಲಿದೆ ಎಂದರು.

ಈ ಸಂದರ್ಭದಲ್ಲಿ ಶಾಸಕ ಕೆ.ಶ್ರೀನಿವಾಸ ಗೌಡ, ದೇವರಾಜ ಅರಸು ರಿಜಿಸ್ಟ್ರಾರ್ ಡಾ.ಎ.ವಿ.ಎಂ.ಕುಟ್ಟಿ, ಇಂಜಿನಿಯರ್ ಹನುಮಂತರಾವ್ ಇತರರು ಹಾಜರಿದ್ದರು.



ಕೊಡಗು, ಕೇರಳ ಸಂತ್ರಸ್ತರ ನಿಧಿಗಾಗಿ ಕೋಲಾರ ನಗರದ ಶ್ರೀ ದೇವರಾಜ ಅರಸು ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಮತ್ತು ಸಿಬ್ಬಂದಿ ಸಂಗ್ರಹಿಸಿದ್ದ 1 ಕೋಟಿ ರೂ.ಚೆಕ್ಕ ಅನ್ನು ಉಸ್ತುವಾರಿ ಸಚಿವ ಕೃಷ್ಣಬೈರೇಗೌಡರಿಗೆ ಸಂಸ್ಥೆಯ ಕಾರ್ಯದರ್ಶಿ ನಾಗರಾಜ್ ನೀಡಿದರು.

### ಒಂದು ತಿಂಗಳ ವೇತನ ಕೊಡುಗೆ

ತಮ್ಮ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿರುವ ಕೇರಳ ಮೂಲಕ ಕೆಲವು ವೈದ್ಯರು ಮತ್ತು ನರ್ಸ್‌ಗಳು ತಮ್ಮ ಇಡೀ ಒಂದು ತಿಂಗಳ ವೇತನವನ್ನು ಕೊಡಗು ಹಾಗೂ ಕೇರಳ ಸಂತ್ರಸ್ತರ ನಿಧಿಗೆ ನೀಡಲು ಮುಂದೆ ಬಂದಿದ್ದಾರೆಂದು ಅರಸು ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಜಿ.ಎಚ್.ನಾಗರಾಜ್ ಹಾಗೂ ಕುಲಾಧಿಪತಿ ಡಾ.ಎಸ್.ಕುಮಾರ್, ಕುಲಪತಿ ಡಾ.ಸಿ.ವಿ.ರಘುವೀರ್, ಆಡಳಿತ ಮಂಡಳಿ ಹಣಕಾಸು ಶಾಖೆ ನಿರ್ದೇಶಕ ಜೆ.ರಾಜೇಂದ್ರ ಹೇಳಿದರು.